**Code No.: MK-02**

Total No. of Questions : 12 | Total No. of Printed Pages : 4

# ಸ್ನಾತಕ ಪರೀಕ್ಷೆ – ೨೦೧೫

## ಬಿ.ಎ. – ವಿದ್ವನ್ಮಧ್ಯಮ – ದ್ವಿತೀಯ ವರ್ಷ

### ವಿಷಯ – ಕನ್ನಡ – II

ದಿನಾಂಕ – 27-3-2015 | ಗರಿಷ್ಠ ಅಂಕ – ೧೦೦

ಸಮಯ – 2.30 P.M. to 5.30 P.M. | Max. Marks – 100

---

**I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ : 10 × 1 = 10**

1. ಶಕುಂತಲೆಯನ್ನು ಪತಿ ಗೃಹಕೆ ಕರೆದೊಯ್ದ, ಕಣ್ವರ ಶಿಷ್ಯ, ಇವನು

   (ಎ) ಕೌಂಡಿನ್ಯ (ಬಿ) ಶಾರ್ಙ್ಗರವ

   (ಸಿ) ವೈಶಂಪಾಯನ (ಡಿ) ಸಂಜಯ

2. ಶುದ್ಧೋಧನನ ಮಂತ್ರಿಯ ಹೆಸರು

   (ಎ) ಸುಮಂತ್ರ (ಬಿ) ಯಶೋಭದ್ರ

   (ಸಿ) ಅಜಿತ (ಡಿ) ವಜ್ರಸೇನ

3. ಗೃಹಿಣಿ ಆಶ್ರಮದಲ್ಲಿದ್ದು ಸೇವೆ ಮಾಡಿದುದು ಈ ಅಪೇಕ್ಷೆಯಿಂದ

   (ಎ) ಆರೋಗ್ಯ (ಬಿ) ಮೋಕ್ಷ

   (ಸಿ) ಪುತ್ರ ಸಂತಾನ (ಡಿ) ಐಶ್ವರ್ಯ

4. ಕಮ್ಮಾರ ವೀರಭದ್ರಾಚಾರಿ ಪಾಠದ ಲೇಖಕರು

   (ಎ) ಗೊರೂರು ರಾಮಸ್ವಾಮಿ ಅಯ್ಯಂಗಾರ್

   (ಬಿ) ಡಿ.ವಿ.ಜಿ.

   (ಸಿ) ವೈದೇಹಿ

   (ಡಿ) ಪು.ತಿ.ನ.

5. ಕಾಳಿದಾಸನನ್ನು ಶಾಸನದಲ್ಲಿ ಸ್ಮರಿಸಿರುವ ಕವಿ

   (ಎ) ಪೊನ್ನ (ಬಿ) ರವಿಕೀರ್ತಿ

   (ಸಿ) ರನ್ನ (ಡಿ) ರವಿಷೇಣ

6. ಮೂರ್ಖೆಯ ಕಲೆಯನ್ನು ತನ್ನ ನಾಟಕದಲ್ಲಿ ಬಳಸಿದ ಪ್ರಾಚೀನ ನಾಟಕಕಾರರಲ್ಲಿ ಇವನೇ ಮೊದಲಿಗನು

   (ಎ) ಶೂದ್ರಕ (ಬಿ) ಭಾಸ

   (ಸಿ) ಭವಭೂತಿ (ಡಿ) ಹರ್ಷ

7. ಸಂಸ್ಕೃತ ಭಾಷೆಯೊಂದಿಗೆ ಸಂಬಂಧ ಹೊಂದಿರುವ ಆಫ್ಘಾನಿಸ್ತಾನದ ಭಾಷೆಗಳಾವುವು?

(ಎ) ಅರೇಬಿಯನ್–ಪರ್ಷಿಯನ್ (ಬಿ) ತುರ್ಕಿ–ಅರೇಬಿಯನ್

(ಸಿ) ಪರ್ಷಿಯನ್–ಪುಷ್ಟು (ಡಿ) ಉರ್ದು–ಅರೇಬಿಯನ್

8. ಯಜ್ಞಗಳಲ್ಲೇ ಶ್ರೇಷ್ಠವಾದ ಯಜ್ಞ, ಸರ್ವೋತ್ಕೃಷ್ಟವಾದ ಯಜ್ಞ ಇದು

(ಎ) ದ್ರವ್ಯ ಯಜ್ಞ (ಬಿ) ಜ್ಞಾನಯಜ್ಞ

(ಸಿ) ಧ್ಯಾನಯಜ್ಞ (ಡಿ) ನಿಷ್ಕಮ ಕರ್ಮಯಜ್ಞ

9. ಹಿಂದೂ ಸಾಮ್ರಾಜ್ಯ ಸ್ಥಾಪನೆಯ ಸಂಕಲ್ಪವನ್ನು ಹಂಪೆಯಲ್ಲಿ ಮಾಡಿದ ಸನ್ಯಾಸಿ

(ಎ) ವಿದ್ಯಾರಣ್ಯರು (ಬಿ) ವಿದ್ಯಾತೀರ್ಥರು

(ಸಿ) ವಿದ್ಯಾಭೂಷಣರು (ಡಿ) ವಿದ್ಯಾನಂದರು

10. ಶ್ರೀರಾಮ ಸ್ಪರ್ಶದಿಂದ ಪವಿತ್ರವಾಗಿರುವ ಸರೋವರ

(ಎ) ಮಾನಸ ಸರೋವರ (ಬಿ) ಬ್ರಹ್ಮ ಸರೋವರ

(ಸಿ) ಅಮೃತ ಸರೋವರ (ಡಿ) ಪಂಪಾ ಸರೋವರ

**II. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ : 5 × 1 = 5**

1. ವೇದೋಕ್ತ ಪದವು ___________ ಸಂಧಿಗೆ ಉದಾಹರಣೆಯಾಗಿದೆ.
2. ಯಜ್ಞ ಪದದ ತದ್ಭವ ರೂಪ ___________.
3. ತುದಿಗಾಲು ಈ ಶಬ್ದವನ್ನು ಬಿಡಿಸಿ ಬರೆದರೆ ___________.
4. ಕೆರೆಕಟ್ಟೆ ಇದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ ___________.
5. ಮಾನುಷಿ ಪದದ ವಿರುದ್ಧ ಪದ ___________.

**III. ಆವರಣದಲ್ಲಿ ಸೂಚಿಸಿರುವಂತೆ ಬರೆಯಿರಿ : 5 × 1 = 5**

1. ನಮ್ಮ ಊರಿನ ಮನೆಗಳನ್ನೆಲ್ಲ ವೀರಭದ್ರಾಚಾರಿಯೇ <u>ಕಟ್ಟಿದ್ದಾನೆ</u>.
(ಗೆರೆ ಎಳೆದ ಪದವು ಯಾವ ಕಾಲವನ್ನು ಸೂಚಿಸುತ್ತಿದೆ ತಿಳಿಸಿ)
2. ರಾಮ ರಾಮ ಏಕಮ್ಮ ಹಾಗಂತೀರಿ ಹೆಣ್ಣು ಮಕ್ಕಳು ಮಕ್ಕಳಲ್ಲವೇ
(ಈ ವಾಕ್ಯಕ್ಕೆ ಲೇಖನ ಚಿಹ್ನೆ ಹಾಕಿರಿ)
3. <u>ದೂರದಲ್ಲಿ</u> ಒಂದು ಪರಿವ್ರಾಜಕರ ಗುಂಪು ಬರುತ್ತಿರುವುದು ಕಂಡಿತು.
(ಗೆರೆ ಎಳೆದ ಪದದ ವಿಭಕ್ತಿ ಪ್ರತ್ಯಯವನ್ನು ಗುರುತಿಸಿ)
4. <u>ಹೊಸ ಹೊಸ</u> ವಿಚಾರಗಳು ಪ್ರತಿನಿತ್ಯವೂ ಬರುತ್ತಿದೆ.
(ಗೆರೆ ಎಳೆದ ಪದದ ವ್ಯಾಕರಣಾಂಶ ತಿಳಿಸಿ)
5. ವರ್ಣನೆ ವಿರಹಾವಸ್ಥೆಯ ಯಕ್ಷಯಕ್ಷಿಯರ ಒಬ್ಬ ಮೇಘದೂತದಲ್ಲಿ ಇದೆ.
(ಅರ್ಥ ಪೂರ್ಣ ವಾಕ್ಯ ಮಾಡಿ)

**Code No.: MK-02**

**IV. ಹೊಂದಿಸಿ ಬರೆಯಿರಿ :** **5 × 1 = 5**

| | ‘ಅ’ | ‘ಆ’ |
|---|---|---|
| 1. | ಅನತಿ | ದುಂಬಿ |
| 2. | ಸ್ಥಾವರ | ಅನುಕರಣಾವ್ಯಯ |
| 3. | ಭೇಕ | ಸ್ವಲ್ಪ |
| 4. | ಜುಳುಜುಳು | ಜಂಗಮ |
| 5. | ಮೇನಕೆ | ಕಪ್ಪೆ |
| | | ಅಪ್ಸರೆ |

**V. ಗುಂಪಿಗೆ ಸೇರದ ಪದವನ್ನು ಗುರುತಿಸಿರಿ :** **5 × 1 = 5**

1. ಪುಸ್ತಕ, ಶೃಂಗಾರ, ಸಕ್ಕರೆ, ಉದ್ಯೋಗ
2. ನೂರಾರು, ಕರುಣೆಯಿಲ್ಲದೆ, ಮನದೊಳಗೆ, ಬೇರೊಬ್ಬ
3. ಢಣಢಣ, ಜಣಜಣ, ಟಣಟಣ, ಕಣಕಣ
4. ಅನಸೂಯೆ, ಪ್ರಿಯಂವದೆ, ಗೌತಮಿ, ಯಶೋಧರೆ
5. ಶಂಕಚೂಡ, ಜೀಮೂತವಾಹನ, ಗೌರಿ, ಪುರೂರವ

**VI. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ :** **10 × 1 = 10**

1. ವೀರಭದ್ರಾಚಾರಿಗೆ ಯಾವ ಬಿರುದಿತ್ತು?
2. ಬುದ್ಧನ ಆಪ್ತ ಶಿಷ್ಯರು ಯಾರು?
3. ಶಕುಂತಲೆ ಹೆಸರಿಸಿರುವ ದುಷ್ಯಂತನ ಇತರ ಪತ್ನಿಯರು ಯಾರು?
4. ಮಗನನ್ನು ಬಯಸಿದ ಗೃಹಿಣಿ ಕೊನೆಗೆ ಏನನ್ನು ಪಡೆದುಕೊಂಡಳು? ಯಾರನ್ನು ಕಳೆದುಕೊಂಡಳು?
5. ಯಜ್ಞತತ್ತ್ವಕ್ಕೆ ಮುಖ್ಯವಾದುದು ಯಾವುದು?
6. ಆಫ್‌ಘನ್ ವಿದ್ಯಾರ್ಥಿಗಳು ಸಂಪಾದಿಸಿ, ಪ್ರಕಟಿಸುತ್ತಿದ್ದ ಮಾಸ ಪತ್ರಿಕೆಯ ಹೆಸರೇನು?
7. ಬೇಂದ್ರೆಯವರ ಪ್ರಕಾರ ಕಾಮ ಯಾವಾಗ ಜೀವೋನ್ನತಿಗೆ ಹಾದಿಯಾಗುವುದು?
8. ಮೂರ್ಖೆಯ ನಾಟಕೀಯ ಸಂಕೇತದ ಹುಟ್ಟಿಗೆ ಕಾರಣವಾದ ಕಲೆ ಯಾವುದು?
9. ಕೆಸರಿನಲ್ಲಿಯೂ ಮಳೆಯಲ್ಲಿಯೂ ನೆನೆದು ಬಂದವರಿಗೆ ಏನು ಸಿಕ್ಕಿತು?
10. ರಾಮ ದರ್ಶನಕ್ಕಾಗಿ ಚಕೋರಿಯಂತೆ ಯಾರು ಕಾದಿದ್ದರು?

**VII. ಈ ಕೆಳಗಿನ ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿರಿ :** **10 × 2 = 20**

1. ವೀರಭದ್ರಾಚಾರಿಗೆ ಹೊಸ ಹುದ್ದೆ ಹೇಗೆ ತೋರಿತು?
2. ಕಪಿಲ ವಸ್ತುವಿನ ಪುರ ಜನರು ಬುದ್ಧನನ್ನು ನೋಡಿ ಏಕೆ ಬೆಚ್ಚಿ ಬಿದ್ದರು?
3. ಕನ್ನಡದಲ್ಲಿ ಹೊಸ ಪದಗಳನ್ನು ಮಾಡಿಕೊಳ್ಳಲು ಡಿ.ವಿ.ಜಿ. ಅವರು ಸೂಚಿಸಿರುವ ಎರಡು ವಿಧಾನಗಳಾವುವು?
4. ಯಜ್ಞ ಎಂಬ ಪದದ ಪದಶಃ ಅರ್ಥ ಮತ್ತು ರೂಢಿಯಲ್ಲಿರುವ ಅರ್ಥ ತಿಳಿಸಿ.
5. ದುಷ್ಯಂತ ಬರುವುದಕ್ಕಿಂತ ಮೊದಲು ಶಕುಂತಲೆಯ ದಿನಗಳು ಹೇಗೆ ಕಳೆಯುತ್ತಿತ್ತು?



ಪು.ತಿ.ನೋ.

**Code No.: MK-02**

6. ಆಶ್ರಮಕ್ಕೆ ಬರುವ ಮುನ್ನ ಪುತ್ರ ಸಂತಾನ ಬಯಸಿ ಗೃಹಿಣಿ ಏನೇನು ಮಾಡಿದ್ದಳು?
7. ಮೇಘದೂತದಲ್ಲಿ ಕಾಳಿದಾಸ ಬಳಸಿದ ಮಂದಾಕ್ರಾಂತ ವೃತ್ತದ ಬಗೆಗೆ ಬೇಂದ್ರೆಯವರು ಏನು ಹೇಳಿದ್ದಾರೆ?
8. ಸಂಸ್ಕೃತ ನಾಟಕಕಾರರಿಗೆ ಯಾವ ಕಲೆಯಲ್ಲಿ ವಿಶೇಷ ಅಭಿರುಚಿ ಇದೆ ಮತ್ತು ಅದನ್ನು ಅವರು ಹೇಗೆ ಗುರುತಿಸುತ್ತಾರೆ?
9. ವಿದ್ಯಾರಣ್ಯರ ಪೂಜೆ ಹೇಗೆ ನಡೆಯಿತು?
10. ವಿಠಲರಾಯನ ಗುಡಿಯಲ್ಲಿ ಚೆನ್ನಯ್ಯ ಕೋತಿಗಳೊಂದಿಗೆ ಹೇಗೆ ಕಾಲ ಕಳೆದ?

**VIII. ಕೆಳಗಿನವುಗಳಲ್ಲಿ ಮೂರು ವಾಕ್ಯಗಳ ಸಂದರ್ಭ ಸಹಿತ (ತಿಳಿಸಿರಿ) ವಿವರಿಸಿರಿ : 3 × 3 = 9**

1. "ಪಾಯಸ class ಪಾಯಸ ಸಾರ್".
2. ಹಸಿಹಸಿರು ತಾಳೆ ಮರಗಳು ಭಗ್ಗನೆ ಹತ್ತಿಕೊಂಡು ಉರಿದವು.
3. "ಇನ್ನು ನನ್ನ ಮೇಲೆ ನಿಮ್ಮ ಗ್ರಹಗಳ ಆಟ ನಡೆಯುವುದಿಲ್ಲ".
4. ಉಜ್ಜಯಿನಿಯಿಂದ ದಕ್ಷಿಣಕ್ಕೆ ಅಗಲಿ ಬಂದ ವಿರಹಿ ರಸಿಕನ ಕಾವ್ಯವಿದು.

**IX. ಇಬ್ಬರು ಲೇಖಕರ ಕಾಲ, ಸ್ಥಳ, ಕೃತಿಗಳನ್ನು ತಿಳಿಸಿರಿ : 2 × 3 = 6**

1. ಡಿ.ವಿ.ಜಿ.
2. ದ.ರಾ. ಬೇಂದ್ರೆ
3. ಗೊರೂರು ರಾಮಸ್ವಾಮಿ ಅಯ್ಯಂಗಾರ್

**X. ಯಾವುದಾದರೂ ಮೂರು ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿರಿ : 3 × 4 = 12**

1. ಯಜ್ಞಗಳನ್ನು ಹೇಗೆ ವಿಂಗಡಿಸಲಾಗಿದೆ ವಿವರಿಸಿ.
2. ಶುದ್ಧೋಧನನು ವರ್ಣಿಸಿದ ಯಶೋಧರೆಯ ಗುಣಗಳನ್ನು ವಿವರಿಸಿ.
3. ಸುರಿದ ಮಳೆ, ಕವಿದ ಕತ್ತಲೆಯಲ್ಲಿ, ಪಂಪಾ ಯಾತ್ರಿಕರು ದಾರಿಯಲ್ಲಿ ಪಡೆದ ಅನುಭವಗಳ ಚಿತ್ರಿಸಿ.
4. ಆಶ್ರಮದ ಬದುಕಿನ ಬಗೆಗೆ ಶಕುಂತಲೆಯ ಅಭಿಪ್ರಾಯಗಳನ್ನು ಸಂಗ್ರಹಿಸಿ.

**XI. ಯಾವುದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ : 1 × 3 = 3**

1. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?
2. ಹಾಸಿಗೆ ಇದ್ದಷ್ಟು ಕಾಲು ಚಾಚು.

**XII. ಪತ್ರ ಅಥವಾ ಪ್ರಬಂಧ ಬರೆಯಿರಿ : 1 × 10 = 10**

1. ನಿಮ್ಮನ್ನು ನೀವು ಕಮಲಾಪುರದ, ರಮಾ/ರಾಮ ಎಂದು ಕಲ್ಪಿಸಿಕೊಂಡು ನಿಮ್ಮ ಊರಿಗೆ ಹೆಚ್ಚಿನ ಸಾರಿಗೆ ಸಂಪರ್ಕ ಕಲ್ಪಿಸುವಂತೆ ಕೋರಿ ಕರ್ನಾಟಕ ಸರ್ಕಾರದ ಸಾರಿಗೆ ಸಚಿವರಿಗೆ ಒಂದು ಪತ್ರ ಬರೆಯಿರಿ.

ಅಥವಾ

2. ಭಯೋತ್ಪಾದನೆ ಜಾಗತಿಕ ಸಮಸ್ಯೆ ಈ ವಿಷಯ ಕುರಿತು 12-15 ವಾಕ್ಯಗಳಲ್ಲಿ ಪ್ರಬಂಧ ರಚಿಸಿರಿ.

---